

ಮೇಲೆ ಉಟ್ಟ ನೆರಿಗೆಯೊತ್ತಿದ ಸೀರೆಯನ್ನು ಸರಿ ಮಾಡಿಕೊಂಡಳು. ಸೀರೆಯ ಮೋಟು ಸೆರಗನ್ನು ತೆಗೆದು ಸೊಂಟಕ್ಕೆ ಸಿಕ್ಕಿಸಿಕೊಂಡಳು. ಏನೂ ಮಾಡಿದರೂ ಸೆಖೆ ಕಡಿಮೆಯಾಗಲಿಲ್ಲ, ಹೊಟ್ಟೆ ತೊಳಸುವುದು ನಿಲ್ಲಲಿಲ್ಲ. ಎದೆ ಢವ ಢವ ಹೊಡೆದುಕೊಳ್ಳುತ್ತಿದೆ. ತನ್ನ ಎಲ್ಲಾ ರೋಗಕ್ಕೆ ಚಾವೇ ಮದ್ದು ಎಂದು ಚಾ ಗ್ಯಾನದಲ್ಲಿ ಕೈ ಕೊಪ್ಪೆ ಮಾಡಿ ಹಣೆ ಮೇಲಿಟ್ಟು ಆಕಾಶವನ್ನೊಮ್ಮೆ ದಿಟ್ಟಿಸಿದಳು. 'ಹೇಗಾದರೂ ತಾನು ಮಗನ ಮನೆಗೆ ಹೋಗುವ ಸುದ್ದಿ ಗಣಪಿಗೆ ಮುಟ್ಟಿಸಲೇಬೇಕಲ್ಲ. ಅವಳ ಮನೆಗೆ ಹೊರಟರಾಯಿತು' ಎಂದು ಏಳಲು ಹೋದರೆ, ಕಾಲುಗಳು ಥರ ಥರ ನಡುಗುತ್ತಿವೆ. ಬೈಗೆಲ್ಲ ಮಳೆ ಸುರಿದಿದ್ದರೂ ಇವತ್ತು ರಣ ರಣ ಬಿಸಿಲು ಮೈ ಬೆವರಿಳಿಸುತ್ತಿತ್ತು.

ಹೇಗಾದರೂ ತಾನೆ ಒಳಗೆ ಹೋಗಿ ಬೆಂಕಿ ಹಚ್ಚಿ ಚಾ ಕಣ್ಣು ಮಾಡಿ ಕುಡಿಯುವ ಯೋಚನೆ ಬಂತಾದರೂ, ಸೌದೆ ಕಂಡಿಗೆ ಹೋಗಿ ಜಿಗ್ಗು ಕಟ್ಟಿಗೆ ತಂದು, ಹಾಳೆಯನ್ನು ಒಲೆಗೆ ಹಾಳೆ ಸಿಗಿದು ಹಾಕಿ, ಸೌದೆ ಕೂಡಿ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಬೇಕು. ಚಾ ಕಣ್ಣನ್ನು ಮಾಡಿದರೆ ಮುಗಿಯಿತಾ? ಬೂದಿ ಹಾಕಿ ತಪ್ಪಲೆ ತಿಕ್ಕಬೇಕು, ಲೋಟ ತೊಳೆಯಬೇಕು. ಒಂದು ಲೋಟ ಚಾ ಕಣ್ಣಿಗೆ ಇಷ್ಟೆಲ್ಲಾ ತಾಪತ್ರಯ ಪಡುವ ಬದಲು 'ಹೆಂಗಾದ್ರೂ ನಾನ್ ಮಗನ್ ಮನಿಗೆ ಹೋಗ ಸುದ್ದಿ ಗಣಪಿಗೆ ಮುಟ್ಟಿಸ್ಬಕಲ್ಲ, ಅವಳ ಮನಿಗೆ ಹೊಂಟ್ರಾತು. ತನ್ ನಿರ್ಧಾರ ಹೇಳಿ, ಅವ್ಳಂಗೆ ನಾನೂ ಮಕ್ಕಳು ಮೊಮ್ಮಕ್ಳು ಸೊಸೆರ ಜೊತೆ ಬದ್ಕಕು' ಎಂದುಕೊಂಡು ನಿಧಾನಕ್ಕೆ ಎದ್ದು ಬಾಗಿಲೆಳೆದು ಹೊರಟಳು.

'ಕುನ್ನಿ.. ಕುನ್ನಿ ತಿರ್ಗ್‌ದಂಗೆ ಊರ್ ತಿರ್ಗ್ರ್‌ಯಲ್ಲೆ, ಆ ಕಾಲಾಗ್ ರಕ್ತ ನೋಡು' ಎಂದು ಗಣಪಿ ದೊಡ್ಡಮ್ಮ ಮೈಲಿ ಮೆಟ್ಟಿಲು ಹತ್ತುತ್ತಿದ್ದಂತೆ ಗಂಟಲ ನರ ಹರಿಯುವಂತೆ ಕೂಗಿದಳು. ಮನೆಗೆ ಹೋಗಿ ತಾಸೊಪ್ಪತ್ತು ಆಗ್ಲೆ ಬಂದ್ಯ? ನಾನಿನ್ನು ಹುಡುಗಿ ನೋಡು.. ನಿಂಗ್ ಚಾ ಕಾಯಿಸ್ಕಿಬಂದು ಕುಕ್ಕಕೆ.. ಅಲ್ಲೇ, ನಿನ್ನೆ ಹೆಂಡ ತರಕ್ ಹೋದಳು ನಾರಾಯಣನ ಹೆಂಡ್ತಿಗೂ ಸೊಸೆಗೂ ಜಗಳ ಹಚ್ಚಾಕಿ ಬಂದ್ಯಂತೆ... ' ನಿನ್ ಸೊಸೆ ಚಾ ಕಲಗಚ್ಚು ಮಾಡ್ದಂಗೆ ಮಾಡ್ತತೆ ಅದ್ಯಾಂಗೆ ಕುಡಿತೀರೊ' ಅಂದ್ಯಂತೆ... ಮರ್ಯಾದೆ ಬಿಟ್ಟು ನಿಂತು ಬುಟ್ಟಿಯಾ ನೀನಂತು. ಆದ್ರೂ ನಿನ್ನಂಥ ಆರಾಮಾ ಯಾವ್ ಸಾವ್ಕಾರ್ತಿಗೂ ಇಲ್ಲ ಬಿಡು. ಸುಸ್ತಾದಂಗೆ ನಾಟಕ ಮಾಡ್ಬಡ ಬಾ' ಎಂದು ಒಂದೇ ಸಮನೆ ಒದರಿ ಉಸಿರು ಬಿಟ್ಟಳು.

ಮೈಲಿ ಮುದುಕಿ ಏದುಸಿರು ಬಿಡುತ್ತಾ ಅಲ್ಲೇ ಗೋಡೆಗೊರಗಿ ಕೂತಳು. ಗಣಪಿ ದೊಡ್ಡಮ್ಮ ಆಚೀಚೆ ನೋಡಿ ಸೊಸೆ ಮಕ್ಕಳು ಯಾರೂ ಇಲ್ಲದ್ದನ್ನ ಖಾತ್ರಿ ಮಾಡಿಕೊಂಡು 'ನಂಗೂ ಮೈ ಕೈ ನೋವು ಮೈಲಿ... ನಿದ್ರೆ ಇಲ್ಲ... ವಯಸ್ಸಾತಲ್ಲ... ಹಂಗೆ ಸಾರಾಯಿ ಕುಡ್ದ್ರೆ ಎರಡಕ್ಕೂ ಒಳ್ಳೆ ಮದ್ದಂತೆ... ನೀನೇನೋ ಬೋಬಿ ತಿಂತಿಯಂತೆ. ರುಚಿನಾ? ನಾಳೆ ಇಟಗಿಗೆ ಹೋಗ್ಬಕಾರೆ ಇಲ್ಲಿ ಬಂದು ಹೋಗು.. ದುಡ್ಡು ಕೊಡ್ತಿ' ಎಂದಳು. ಚಣ ಹೊತ್ತಿನ ಮುಂಚಿನ ಗಣಪಿ ದೊಡ್ಡಮ್ಮನ ಧ್ವನಿಗೂ ಈಗಿನ ಧ್ವನಿಗೂ ತಾಳಮೇಳವೇ ಸಿಕ್ಕದೆ, ಅವಳು ಗೇಲಿ ಮಾಡಲಿಕ್ಕೆ ಹೇಳ್ತಿದ್ದಾಳೋ, ನಿಜವಾಗಿಯೂ ಹೇಳುತ್ತಿದ್ದಾಳೋ ಅರ್ಥವಾಗದೆ ಮೈಲಿ ಮುದುಕಿ ಮಿಕಿ ಮಿಕಿ ನೋಡುತ್ತ ಕೂತಳು. ಬೆವರು ಅವಳ ಹಣೆಯಿಂದ ಚರ್ಮದ ನೆರಿಗೆಗಳ ಗುಂಟ ಬುಳುಬುಳು ಕೆಳಗಿಳಿಯುತ್ತಿತ್ತು.

■